1993, (Karnataka Ordinance 10 of 1993) are" shall be substituted;

"(ii) That in sub-clause (2), for the words "said Ordinance" the words "said Ordinances" shall be substituted."

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ 5 ತಿದ್ದುಪಡಿಯೊಂದಿಗೆ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ 'ತಿದ್ದುಪಡಿಯಾದ 5ನೇ ಖಂಡ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 5 ತಿದುಪಡಿಯೊಂದಿಗೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ 'ಮೊದಲನೆ ಖಂಡ ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ 1993ನೇ ಸಾಲಿನ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "1993ನೇ ಸಾಲಿನ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(3)1993ನೇ ಸಾಲಿನ ಕರ್ನಾಟಕ ಅಬಕಾರಿ ಎರಡನೇ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನ ಪ್ರಸ್ತಾವ

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಯವರು) ಮಾನ್ಯ ಅಧ್ಯಕ್ಷರೇ, 1993ನೇ ಸಾಲಿನ ಕರ್ನಾಟಕ ಅಬಕಾರಿ ಎರಡನೇ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

+ ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ) : ಮಾನ್ಯ ಅಧ್ಯಕ್ಷರೇ, ನಾವು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. 1974ನೇ ಇಸವಿಯ ಕೇಸ್ಗಳು ಏನಿವೆ, 1801, ಅದು ಸುಪ್ರೀಮ್ಕೋರ್ಟಿನಲ್ಲಿ ತೀರ್ಮಾನವಾಗಿದ್ದು, ನನಗೆ ತಿಳಿದಿರುವ ಪ್ರಕಾರ 1978ನೇ ಇಸವಿಯಲ್ಲಿ ಆಗಿದೆ. ನಾನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುವುದೇನೆಂದರೆ, ಈ ರೀತಿಯಲ್ಲಿ ಇದೊಂದೇ ಆಗಿಲ್ಲ. ನಮ್ಮಲ್ಲಿ ಒಂದು ಚಾಳಿ ಬೆಳೆದಿದೆ. ನಮ್ಮ ಸರಕಾರದ ಇಲಾಖೆಗಳಲ್ಲಿ ಹೈಕೋರ್ಟಿನಿಂದ ಅಥವಾ ಸುಪ್ರೀಮ್ ಕೋರ್ಟಿನ ತೀರ್ಮಾನವಾದರೂ ಕೂಡ ಆ ತೀರ್ಮಾನವನ್ನು ಜಾರಿಗೆ ತರುವಾಗ ಅತಿಯಾದ ವಿಳಂಬವನ್ನು ಮಾಡುವ ಒಂದು ಪ್ರವೃತ್ತಿ ನಮ್ಮ ಸರಕಾರದ ಎಲ್ಲಾ ಇಲಾಖೆಗಳಲ್ಲಿಯೂ ಇದೆ ಎಂದರೆ ತಪ್ಪಾಗಲಾರದು. ಅಥವಾ ಬಹುತೇಕ ಇಲಾಖೆಗಳಲ್ಲಿ ಇದೆ ಎಂದರೂ ತಪ್ಪಾಗಲಿಕ್ಕಿಲ್ಲ. ಯಾವ ಒಂದು ಹೈಕೋರ್ಟ್ನ ತೀರ್ಮಾನವನ್ನು ಸುಪ್ರೀಂ ಕೋರ್ಟ್ ಅಪ್ಹೆಲ್ಡ್ ಮಾಡಿತು, ಅದು 1974ನೇ ಇಸವಿಗೆ ಸಂಬಂಧಪಟ್ಟಿದ್ದರೂ ಕೂಡ 1991ರಲ್ಲಿ ತೀರ್ಮಾನವಾಗುತ್ತದೆ. ತೀರ್ಮಾನವಾದ ಮೇಲೆಯೂ ಇಂಥ ಒಂದು ಕಾನೂನನ್ನು ತರುವುದಕ್ಕೆ ನಮಗೆ ಕನಿಷ್ಟಪಕ್ಷ ಮೂರು ವರ್ಷಗಳು ಬೇಕಾಗಿಲ್ಲ. ಇಂಥ ಒಂದು ಅಸಡ್ಡೆಯ ಮನೋಭಾವ ಅಥವಾ ಜನರ ದೃಷ್ಟಿಯಿಂದ, ಸರಕಾರದ ಆದಾಯದ ದೃಷ್ಟಿಯಿಂದ, ಯಾವುದನ್ನು ರೆಟ್ರಾಸ್ಪೆಕ್ಟೀವ್ ಆಗಿ ಮಾಡಲೇ ತರಬಹುದಾಗಿತ್ತು, ಅದಕ್ಕೆ ಅತಿಯಾದಂಥ ವಿಳಂಬವಾಗಿದೆ. ಇಂಥ ವಿಳಂಬವು ಸರಕಾರದ ಇಲಾಖೆಗಳಲ್ಲಿ ಆಗದಂಥ ರೀತಿಯಲ್ಲಿ ಸರಕಾರ ಮತ್ತು ಸಂಬಂಧಪಟ್ಟವರು ಎಚ್ಚರ ವಹಿಸಬೇಕೆಂಬ ಮಾತನ್ನು ಹೇಳುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಹೇಳಬೇಕಾದಂತಾದ್ದು ಬಹಳ ಇದೆ. ಇಷ್ಟು ಹೊತ್ತು ನಾವು ಸಾರಾಯಿ ಬಗ್ಗೆ ಮಾತನಾಡಿದ್ದೇವೆ. ಈಗ ಐಎಂಎಫ್ಎಲ್- ಬಗ್ಗೆ ಮಾತನಾಡಬೇಕಾಗಿದೆ. ತಾವುಗಳು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಮತ್ತೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ಈಗ ಎಕ್ಸೈಸ್ ಬಗ್ಗೆ, ರೆವಿನ್ಯೂ ಬಗ್ಗೆ ಸ್ಪಷ್ಟವಾಗಿ ಚರ್ಚೆಯಾಯಿತು. ಅದೇ ಪ್ರಶ್ನೆಯು ಇಲ್ಲಿ ಬರುವುದು. ಐಎಂಎಫ್ ನಲ್ಲಿಯೂ ಕೂಡ 30 ಕೋಟಿಗಳ ಇನ್ವಾಲ್ವ್ಮೆಂಟ್ ಇದೆ. 8 ಸಾವಿರ ರಿಟ್ಪಿಟೀಷನ್ಸ್ ಹೈಕೋರ್ಟ್ನಲ್ಲಿದೆ. ಈ 30 ಕೋಟಿಯನ್ನು ನಾವು ರಿಫೆಂಡ್ ಮಾಡಬೇಕಾಗುತ್ತದೆ. ತಾವು ಹೇಳಿದ್ದು ಸಿವಿಲ್ ಅಫೀಲ್ ನಂಬರ್, 1801, 1974: ಸುಪ್ರೀಮ್ ಕೋರ್ಟ್ ಡಿಸೈಡ್ ಮಾಡಿದ್ದು 21-8-1991ರಂದು. earlier ಲೆಜಿಸ್ಲೇಷನ್ ತರಬಹುದಾಗಿತ್ತು. After I took tax initiative it has come.

ಶ್ರೀ ಹೆಚ್. ಏಕಾಂತಯ್ಯ : ತಾವು ಇರಲಿ ಇಲ್ಲದಿರಲಿ, ಸಂಬಂಧಪಟ್ಟವರು ತರಬೇಕಾಗಿತ್ತು ಎಂಬುದು ನಮ್ಮ ಆಸೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಒಪ್ಪುತ್ತೇನೆ. ಆದ್ದರಿಂದ ಇದನ್ನು ಮಂಜೂರು ಮಾಡಿಕೊಡಿ. It is a question of Rs 30 crores.

ಶ್ರೀ ಸಿ. ಬೈರೇಗೌಡ : ಇದು ಕೇವಲ 30 ಕೋಟಿಗಳ ಮಾತಲ್ಲ. ಈ ಐಎಂಎಫ್ಎಲ್ನಿಂದನೇ ಇದೆಲ್ಲಾ ಪ್ರಾರಂಭವಾಗಿದ್ದು.

ಅಧ್ಯಕ್ಷರು : ತಾವುಗಳು ಮತ್ತೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವಾಗ ಮಾತನಾಡಿ.

ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೇ, ಈ ಮಸೂದೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "1993ನೇ ಸಾಲಿನ ಕರ್ನಾಟಕ ಅಬಕಾರಿ ಎರಡನೇ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಅಧ್ಯಕ್ಷರು : "2 ಮತ್ತು 3ನೇ ಖಂಡಗಳು, ಎರಡೂ ಸೇರಿದಂತೆ, ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 4ಕ್ಕೆ ತಿದ್ದುಪಡಿ

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ, ಖಂಡೇ 4ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ನಾನು ಸೂಚಿಸುತ್ತಿದ್ದೇನೆ;

"That the following clause shall be inserted, namely;

4. Repeal and Savings : (1) The Karnataka Excise (Seconnd Amendment) Ordinance, 1993 (Karnataka Ordinance 11 of 1993) is hereby repealed.

(2) Notwithstanding such repeal, anything done or any action taken under the principal Act as amended by the said Ordinance shall be deemed to have been done or taken under the principal Act as amended by this Act"

ಅಧ್ಯಕ್ಷರು : ಪ್ರಶ್ನೆ ಏನೆಂದರೆ,

"That the following clause shall be inserted, namely;

"4. Repeal and Savings : (1) The Karnataka Excise (Second Amendment) Ordinance, 1993 (Karnataka Ordinance 11 of 1993) is here by repealed.

(2) Notwithstanding such repeal, anything done or any action taken under the principal Act as amended by the said Ordinance shall be deemed to have been done or taken under the principal Act as amended by this Act"

ಖಂಡ 4 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಶ್ನೆ ಏನೆಂದರೆ, "ಖಂಡ 4ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 4 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1ಕ್ಕೆ ತಿದ್ದುಪಡಿ

ಶ್ರೀ ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ, ಖಂಡ 1 ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"That for sub-clause (2) of clause 1 of the Karnataka Excise (Second Amendment) Bill, 1993 (here inafter referred to as the said Bill), the following shall be substituted, namely;

"(2) It shall be deemed to have come into force with effect from the eighth day of October 1993"

ಅಧ್ಯಕ್ಷರು : ಪ್ರಶ್ನೆ ಏನೆಂದರೆ,

"That for sub-clause (2) of clause 1 of the Karnataka Excise (Second Amendment) Bill, 1993 (hereinafter referred to as the said Bill), the following shall be substituted, namely;

"(2) It shall be deemed to have come into force with effect from the eighth day of Ocotober, 1993"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 1 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಶ್ನೆ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿ) : "1993ನೇ ಸಾಲಿನ ಕರ್ನಾಟಕ ಎರಡನೇ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೂಪದಲ್ಲಿ ಅಂಗೀಕರಿಸುವುದು.

ಅಧ್ಯಕ್ಷರು : ಪ್ರಶ್ನೆ ಏನೆಂದರೆ, "1993ನೇ ಸಾಲಿನ ಕರ್ನಾಟಕ ಎರಡನೇ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೂಪದಲ್ಲಿ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ವಿಶೇಷ ಪ್ರಸ್ತಾವನೆ

ಶ್ರೀ ಎಂ. ಇನ್ನಾಸಪ್ಪನವರ ಸೇವೆಯನ್ನು ದಾಖಲು ಮಾಡಿಕೊಳ್ಳುವ ಬಗ್ಗೆ

ಶ್ರೀ ಎಂ. ವೀರಪ್ಪ ಮೊಯಲಿ : ಸಭಾಧ್ಯಕ್ಷರೇ ತಮ್ಮ ಅನುಮತಿ ಕೋರಿ ಈ ವಿಶೇಷ ಪ್ರಸ್ತಾವನೆಯನ್ನು ಮಂಡಿಸುತ್ತೇನೆ:

"ದಿನಾಂಕ 31ನೇ ಡಿಸೆಂಬರ್ 1993ರಂದು ವಿಧಾನಮಂಡಲದ ಕಾರ್ಯದರ್ಶಿ ಹುದ್ದೆಯಿಂದ ನಿವೃತ್ತಿ ಹೊಂದಿದ ಶ್ರೀ ಎಂ. ಇನ್ನಾಸಪ್ಪ ಅವರು ತಮ್ಮ ಸೇವಾವಧಿಯಲ್ಲಿ ಸದನಕ್ಕೆ ಹಾಗೂ ಅಧ್ಯಕ್ಷರಿಗೆ ನೀಡಿದ ಸಹಕಾರಕ್ಕೆ ಸರ್ಕಾರದ ಹಾಗೂ ವಿಧಾನಸಭೆಯ ಸದಸ್ಯರ ಪ್ರಶಂಸೆಯನ್ನು ದಾಖಲುಗೊಳಿಸಿ ಅದನ್ನು ಅವರಿಗೆ ತಿಳಿಸುವಂತೆ ಮಾನ್ಯ ಸಭಾಧ್ಯಕ್ಷರನ್ನು ಕೋರಬೇಕೆಂದು ಈ ಸದನವು ಪ್ರಸ್ತಾಪಿಸುತ್ತದೆ."

ಅಧ್ಯಕ್ಷರು : ಪ್ರಶ್ನೆ ಏನೆಂದರೆ

"ದಿನಾಂಕ 31ನೇ ಡಿಸೆಂಬರ್ 1993 ರಂದು ವಿಧಾನಮಂಡಲದ ಕಾರ್ಯದರ್ಶಿ ಹುದ್ದೆಯಿಂದ ನಿವೃತ್ತಿ ಹೊಂದಿದ ಶ್ರೀ ಎಂ. ಇನ್ನಾಸಪ್ಪ ಅವರು ತಮ್ಮ ಸೇವಾವಧಿಯಲ್ಲಿ